**ಶ್ರೀ ಗುರುಭ್ಯೋ ನಮ:.**

## ಅರ್ಘ್ಯದ ಸುತ್ತಮುತ್ತ

‘ಅಹರಹ: ಸಂಧ್ಯಾಂ ಉಪಾ ಸೀತ' ಎಂಬ ಮಾತಿನಂತೆ ದ್ವಿಜ ನಾದವನು ಅವಶ್ಯವಾಗಿಯೂ ಸಂಧ್ಯಾವಂದನೆಯನ್ನು ಮಾಡಬೇಕು. ಸಂಧ್ಯಾವಂದನೆಯಲ್ಲಿ ಮುಖ್ಯವಾದ ಘಟ್ಟ ‘ಅರ್ಘ್ಯಪ್ರದಾನ' .

**‘ಅರ್ಹ ಪೂಜಾ ಯಾಮ್’**ಎಂಬ ಧಾತುವಿನಿಂದ ನಿಷ್ಪನ್ನವಾದ ಅರ್ಘ್ಯ ಶಬ್ದಕ್ಕೆ ಪೂಜಾ ಯೋಗ್ಯವಾದದ್ದು ಎಂದು ಅರ್ಥ. ಅರ್ಘ್ಯ ವೆಂದರೆ ಗಾಯತ್ರಿ ಮಂತ್ರೋ ಚಾರಣ ಪೂರ್ವಕ ಜಲ ದಾನ.

ಏಕೆ ಅರ್ಘ್ಯಪ್ರದಾನ ವನ್ನು ಮಾಡಬೇಕು ಬೇಕು ಎಂದರೆ ೩೦ಕೋಟಿ ಮಂದೇಹ ರಾಕ್ಷಸರು ಪ್ರತಿನಿತ್ಯವೂ ಕೂಡ ಸಂಧ್ಯಾಕಾಲದಲ್ಲಿ ಸೂರ್ಯನನ್ನು ಭಕ್ಷಿಸಲು ಬರುತ್ತಾರೆ. ಆಗ ಬ್ರಾಹ್ಮಣರು ಕೊಡುವಂತಹ ಗಾಯತ್ರಿ ಅಭಿಮಂತ್ರಿತ ವಾದ ಒಂದೊಂದು  ಅರ್ಘ್ಯ ಕೂಡ ವಜ್ರಾಯುಧದಂತೆ ಇದ್ದು ರಾಕ್ಷಸರನ್ನು ಸಂಹರಿಸುತ್ತದೆ. ಹಾಗಿದ್ದರೂ ಕೂಡ ಮೂರು ಅರ್ಘ್ಯಗಳನ್ನು  ಏಕೆ ಕೊಡಬೇಕು ಎಂದರೆ ಅದಕ್ಕೆ ವ್ಯಾಸರು ಹೇಳುತ್ತಾರೆ- **‘ಪ್ರಥಮಂ ಶಸ್ತ್ರನಾಶಾಯ ದ್ವಿತೀಯಂ ಹಯ ನಾಶನೆ ರಾಕ್ಷಸನಾಂ ವಧಾಯಾನ್ಯತ್ ದದ್ಯಾತ್ ಅರ್ಘ್ಯತ್ರಯಂ ಬುಧ:.’**

**ಮೊದಲನೆಯ ಅರ್ಘ್ಯವು ರಾಕ್ಷಸರ ಆಯುಧ ನಾಶಕ್ಕಾಗಿ ಎರಡನೆಯದು ಅವರ ವಾಹನ ನಾಶಕ್ಕಾಗಿ ಮೂರನೆಯದು ಅವರ ನಾಶಕ್ಕಾಗಿ  3 ಅರ್ಘ್ಯ  ಕೊಡತಕ್ಕದ್ದು. ರಾಕ್ಷಸರನ್ನು ಕೊಲ್ಲುವ ಅಧಿಕಾರ ನಮಗಿಲ್ಲ ಎಂದರೆ ಜಗತ್ತಿಗೆ ಹಿತವನ್ನು ಉಂಟುಮಾಡುವ ಸೂರ್ಯನಿಗೆ ತಡೆಗಟ್ಟುವ ರಾಕ್ಷಸರ ಸಂಹಾರವನ್ನು ನಾವು ಭಗವಂತನಲ್ಲಿ ಪ್ರಾರ್ಥಿಸುತ್ತೇವೆ ಅಷ್ಟೇ ಹೊರತು ವೈಯಕ್ತಿಕವಾಗಿ ನಾವು ಕೊಲ್ಲುವುದಿಲ್ಲ.**

ಇನ್ನು ಅರ್ಘ್ಯವನ್ನು ಹೇಗೆ ಕೊಡುವುದು ಎಂದರೆ ಮೊದಲಿಗೆ ಅರ್ಘ್ಯ ಕೊಡುವ ನೀರಿನಲ್ಲಿ ನಮ್ಮ ಕಿರುಬೆರಳಿನಿಂದ ಓಂ, ಭೂ:, ಭುವ:, ಸ್ವ:, ವಂ, ಹ್ರೀಂ ಎಂದು ಪ್ರಣವ ವ್ಯಾಹೃತಿ ಮೊದಲಾದವುಗಳನ್ನು ಬರೆಯಬೇಕು. ಏಕೆಂದರೆ ಶುಕ್ರಾಚಾರ್ಯರ ಆದೇಶದಂತೆ ಅಸುರ ಸಂರಕ್ಷಣೆಗಾಗಿ ನೀರಿನಲ್ಲಿ ವೇತ್ರಪ ನೆಂಬ ದೈತ್ಯನು ಇರುತ್ತಾನೆ, ಅವನ ನಾಶಕ್ಕಾಗಿ ಹೀಗೆ ಯಂತ್ರವನ್ನು ಬರೆಯಬೇಕು. ಇನ್ನು ಅರ್ಘ್ಯವನ್ನು ಹೇಗೆ ಕೊಡುವುದೆಂದರೆ ಎದ್ದು ಎರಡು ಪಾದಗಳನ್ನು ಸಮಾನವಾಗಿ ಮಾಡಿ ಕೈಜೋಡಿಸಿ, ಬೊಗಸೆಗೆ ಅಭಿಮಂತ್ರಿಸಿದ ಜಲವನ್ನು ತೆಗೆದುಕೊಂಡು

ಗೋಶೃಂಗದಷ್ಟು ಕೈಯನ್ನು ಎತ್ತಿ (ಸುಮಾರು ಎರಡು ಅಡಿ ಗಳಿಂದ),ಸೂರ್ಯನನ್ನು ನೋಡುತ್ತಾ, ಪರಮಾತ್ಮನನ್ನು ಧ್ಯಾನಿಸುತ್ತಾ ಅರ್ಘ್ಯ ಪ್ರದಾನವನ್ನು ಮಾಡಬೇಕು. ಅಷ್ಟು ಮಾತ್ರವಲ್ಲದೆ' **ಗಾಯತ್ರ್ಯಾ ಚಾಂ ಜಲಿಂ ದತ್ವಾ ‌‌‌‌‌‌‌‌ ‌‌‌‌‌‌‌‌ ‌‌‌‌‌ ‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌ ‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌‌ _ಧ್ಯಾತ್ವಾ ಸೂರ್ಯ ಗತಂ ಹರಿಂ'**ಎಂದು ಆಚಾರ್ಯರು ಹೇಳಿರುವಂತೆ ಸೂರ್ಯನ ಅಂತರ್ಯಾಮಿಯಾದ ಆ ಸವಿತೃ ನಾಮಕ ಸೂರ್ಯನಾರಾಯಣನಿಗೆ ಅರ್ಘ್ಯವನ್ನು ನೀಡಬೇಕು. ಇನ್ನು ಅರ್ಘ್ಯವನ್ನು ಹೇಗೆ ಕೊಡಬೇಕು ಎಂದರೆ ವಿಶ್ವಾಮಿತ್ರರು ಹೀಗೆ ಹೇಳುತ್ತಾರೆ-

**'ತರ್ಜನ್ಯಾಂಗುಷ್ಠಕರಣೇನ ರಾಕ್ಷಸಿ ಮುದ್ರಿಕಾ ಭವೇತ್.**

**ಯೋ ದದಾತಿ ತಯಾ ಚಾರ್ಘ್ಯಂ ತತ್ತೂಯಂ ರುಧಿರಂ ಭವೇತ್'.**

ತರ್ಜನಿ ಮತ್ತು ಅಂಗುಷ್ಟ ಗಳನ್ನು ಕೂಡಿಸಿದರೆ ಅದು ರಾಕ್ಷಸಿ ಮುದ್ರೆ ಆಗುತ್ತದೆ. ಈ ರಾಕ್ಷಸೀ ಮುದ್ರೆಯಿಂದ ಅರ್ಘ್ಯವನ್ನು ಕೊಟ್ಟರೆ ರಕ್ತ ಕೊಟ್ಟಂತೆ ಆಗುತ್ತದೆ. ಆದ್ದರಿಂದ ಈ 2 ಬೆರಳುಗಳನ್ನು ಬಿಡಿಸಿದ ಬೊಗಸೆಯಿಂದ ಅರ್ಘ್ಯವನ್ನು ಕೊಡಬೇಕು.

ಅರ್ಘ್ಯವನ್ನು ಯಾವ ಕಾಲದಲ್ಲಿ ಹೇಗೆ ಕೊಡುವುದು ಎಂದರೆ-**'ಪ್ರಾ ತರ್ ಮಾಧ್ಯಾಹ್ನಯೋಸ್ತಿಷ್ಠನ್ ಸಾಯಂ ಆಸೀನ ಏವ ತು'**ಎಂಬ ಮಾತಿನಂತೆ ಬೆಳಗ್ಗೆ ಮತ್ತು ಮಧ್ಯಾಹ್ನ ನಿಂತುಕೊಂಡು ಸಾಯಂಕಾಲದಲ್ಲಿ ಕುಳಿತುಕೊಂಡು ಅರ್ಘ್ಯವನ್ನು ಕೊಡತಕ್ಕದ್ದು(ಸಾಮಾನ್ಯವಾಗಿ ಬೆಳಗ್ಗೆ 6:30 ಒಳಗೆ, ಮಧ್ಯಾಹ್ನ 12:30ಗೆ, 6:30 ಒಳಗಡೆ). ಇನ್ನೊಂದು ಮುಖ್ಯವಾದ ಅಂಶವೇನೆಂದರೆ '**ಜಲ ಮಧ್ಯೆ ಜಲಂ ಕ್ಷಿ ಪೇತ್'ಜಲಾ ಭಾವೆ ಶುಚಿಸ್ಥಳೆ'**ಎಂಬಂತೆ ಅರ್ಘ್ಯವನ್ನು ನೀರಿನಲ್ಲಿ ಕೊಡಬೇಕು, ನೀರು ಇಲ್ಲದ ಪಕ್ಷದಲ್ಲಿ ಭೂಮಿಯನ್ನು ಶುಚಿಗೊಳಿಸಿ ಅಲ್ಲಿ ಕೊಡಬಹುದು.

ಈ ರೀತಿಯಾಗಿ ನಾವು ಯಾವ ಕ್ರಮದಿಂದ ಅರ್ಘ್ಯವನ್ನು ಕೊಡಬೇಕು ಎಂದು ನಾವು ನೋಡಿದೆವು, ಈ ಕ್ರಮದಲ್ಲಿ ಬ್ರಾಹ್ಮಣನಾದವನು ಸಕಾಲದಲ್ಲಿ ಆಲಸ್ಯ ಮಾಡದೆ ಅರ್ಘ್ಯವನ್ನು ಕೊಡಬೇಕು. ಅದರಿಂದ ಲೋಕವು ಕ್ಷೇಮ ವಾಗಿರುತ್ತದೆ ಮತ್ತು ನಮಗೂ ಕೂಡ ಆ ಭಗವಂತನ ಅನುಗ್ರಹವಾಗುತ್ತದೆ. ಪ್ರತಿಯೊಂದು ಧರ್ಮದ ವಿಧಿಗಳಲ್ಲೂ ಅಶಕ್ತರಿಗೆ ಒಂದು ಸುಲಭದ ದಾರಿಯನ್ನು ತೋರಿಸುತ್ತದೆ ಧರ್ಮಶಾಸ್ತ್ರ, ಹೀಗೆ ಇಲ್ಲೂ ಕೂಡ' **ಅಶಕ್ತ ಏಕಕಾಲೆ ತು**'ಎಂಬ ಮಾತಿನಂತೆ ಅಶಕ್ತನಾದವನು ಒಂದು ಸಲವಾದರೂ ಅರ್ಘ್ಯವನ್ನು ಕೊಡಬೇಕು.

**<u>ಶ್ರೀಕೃಷ್ಣಾರ್ಪಣಮಸ್ತು</u>**

**<u>ಎಸ್. ಸುಘೋಷ</u>**

**<u>ವ್ಯಾಸತೀರ್ಥ ವಿದ್ಯಾಪೀಠ, ಮೈಸೂರು</u>**